ವಿಭಾಗ 3

ಚಾಂಪಿಯನ್ಸ್

ಕನ್ನಡ

ಆತ್ಮ ಫಲದ
ಚಾಂಪಿಯನ್ಸ್

ಮಧ್ಯಮ

ಉಪಾಧ್ಯಾಯರ ಪುಸ್ತಕ

ಚಾಂಪಿಯನ್‌ಗಳಾಗುವದಕ್ಕೆ...

... ನೀವು ಮತ್ತು ನಾನು ಆತ್ಮನ ಫಲದಿಂದ ಜೀವಿಸುವದನ್ನು ಕಲಿತುಕೊಳ್ಳಬೇಕು ಮತ್ತು ನಮ್ಮ ದೈನಂದಿನ ಕ್ರಿಯೆಗಳಲ್ಲಿ ಎದುರು ಬರುವಂಥಹ ನಮ್ಮ ಪಾಪಗಳಿಗೆ ವಿರುದ್ಧವಾಗಿ ಹೋರಾಡಬೇಕು. ಇದು ಅಷ್ಟು ಸುಲಭವಾಗಿ ಆಗುವಂಥಹ ಕೆಲಸವಲ್ಲ. ಇದಕ್ಕೆ ಸಮಯ, ಕೃಷಿ, ಬೆವರು ಮತ್ತು ಒಂದು ಕಠಿಣವಾದ ಕ್ರಮಶಿಕ್ಷಣೆ ಬೇಕಾಗುವದು.

ಏನೇಯಾಗಲಿ, ವಿಯವಂತರಾಗುವದಕ್ಕೆ, ಖಂಡಿತವಾಗಿ ನಿಮಗೆ ಒಬ್ಬರು ಕೋಚ್ ಬೇಕಾಗುತ್ತಾರೆ.

ನೀವು ಚೆನ್ನಾಗಿ ಕೃಷಿ ಮಾಡುವದಕ್ಕೆ ಈ ತರಗತಿಗಳಿಗೆ ಬಂದು, ತರಬೇತಿಯನ್ನು ಪಡೆದು ಮತ್ತು ನಿಮ್ಮ ಕೋಚ್ ಹೇಳಿದಂಥೆ ಕೇಳಿಸಿಕೊಳ್ಳಿರಿ. ವಾಕ್ಯಗಳನ್ನು ಕಂಠಾಪಾಠ ಮಾಡಿರಿ, ಬೈಬಲ್ ಕಥೆಯನ್ನು ಕೇಳಿಸಿಕೊಳ್ಳಿರಿ ಮತ್ತು ನಿಮ್ಮ ಜೀವನದಲ್ಲಿ ಅಥವಾ ನಿಮ್ಮ ಹೃದಯದಲ್ಲಿರುವ ಪಾಪವನ್ನು ಯಾವರೀತಿ ನಾಕೌಟ್ ಮಾಡುವದಕ್ಕೆ ಬೇಕಾದಂಥಹ ಸಹಾಯವನ್ನು ಪಡೆದುಕೊಳ್ಳಿರಿ.

ಆದನಂತರ ವಾರದ ಮಧ್ಯೆದಲ್ಲಿ, ನಿಮ್ಮ ನಿಜವಾದ ಜೀವನದಲ್ಲಿ ಪ್ರತಿಯೊಂದು ಪಾಠವನ್ನು ಪ್ರಯೋಗಾತ್ಮಕವಾಗಿಟ್ಟು ಜೀವಿಸುವದಕ್ಕೆ ರಿಂಗ್‌ನಲ್ಲಿರುವಂಥೆ ಅದರೊಳಗೆ ಪ್ರವೇಶಿಸಿರಿ. ಪ್ರತಿಯೊಂದುಸಲ ನೀವು "ರಿಂಗ್‌ನೊಳಗೆ" ಎನ್ನುವ ಅಂಶದ ಮೇಲೆಯೇ ನಿಮಗೆ ಕೊಡುವ ಕೆಲಸವನ್ನು ಮಾಡುವಿರಿ, ಪಾಪಕ್ಕೆ ನೀವು ದೊಡ್ಡದಾದ ಒಂದು ಪಂಚ್‌ನನ್ನು ಎಸೆಯುವಿರಿ!



ಹಾಗೆಯೇ ಹೋರಾಡುತ್ತಾ ಇರ್ರಿ ಮತ್ತು ಎಲ್ಲಾ ಪೋಟೀಗಳಲ್ಲಿ ನೀವು ಗೆದ್ದು, ದೊಡ್ಡ ಚಾಂಪಿಯನ್ ಆಗುವಿರಿ.

1. ನಂಬಿಕೆ VS ವಿಗ್ರಹಾರಾಧನೆ



ಬೈಬಲ್ ಕಥೆ: ಮಂಜೂಷವು ಕದಿಯಲ್ಪಡುವಿಕೆ
1 ಸಮೂ.5:1–12, 6, 7:3

ಕಂಠಾಪಾಠ ವಚನ

"ಆಕಾಶದಲ್ಲಾಗಲಿ, ಭೂಮಿಯಲ್ಲಾಗಲಿ, ಭೂಮಿಯ ಕೆಳಗಿನ ನೀರಿನಲ್ಲಾಗಲಿ, ಇರುವ ಯಾವುದರ ರೂಪವನ್ನು ಅಥವಾ ವಿಗ್ರಹವನ್ನು ಮಾಡಿಕೊಳ್ಳಬೇಡ." ವಿಮೋಚನಕಾಂಡ 20:4



ರಿಂಗುನೊಳಗೆ

ವಿಗ್ರಹಾರಾಧನೆ ಎಂದು ಎಣಿಸುವುದರಲ್ಲಿ ಪಾಲ್ಗೊಳ್ಳಬಾರದೆನ್ನುವ ಒಂದು ಚಟುವಟಿಕೆಯನ್ನು ಆಯ್ಕೆ ಮಾಡಿಕೊಳ್ಳಿರಿ. ನಿಮ್ಮ ಹೂಗಳನ್ನು ಬಿಚ್ಚಬೇಕೆನ್ನುವ ಪದ್ಧತಿ ಇರಬಹುದು, ಪಾಲ್ಗೊಳ್ಳಬಾರದ ಮೆರವಣಿಗೆ ಇರಬಹುದು, ನೀವು ಹಾಜರಾಗಬಾರದ ಕ್ರೀಡೆಗಳ ಆಟವಾಗಿರಬಹುದು, ಅಥವಾ ಇತರರು ಹೂಗಳನ್ನು ಕೊಂಡುಕೊಳ್ಳುವಾಗ ನೀವು ಕೊಂಡುಕೊಳ್ಳಬಾರದ ವಿಷಯವಾಗಿರಬಹುದು.

2. ನಂಬಿಕೆ VS ನಂಬಿಕೆ ದ್ರೋಹ

ಬೈಬಲ್ ಕಥೆ: ಶದ್ರಕ್ ಮೇಶಕ್ ಅಬೇದ್‌ನೆಗೋ
ದಾನಿ.3:1–21



ಕಂಠಾಪಾಠ ವಚನ

"ನಿನ್ನ ಸತ್ಯಪಥದಲಿ ನಾ ನಡೆವಂತೆ ಬೋಧಿಸೆನಗೆ ಪ್ರಭು. ನಿನ್ನ ಮಾರ್ಗವನು ನಿನ್ನ ನಾಮದಲಿ ಭಯಭಕ್ತಿಯಿರುವಂತೆ ಅನುಗ್ರಹಿಸೆನಗೆ ನೀ ಏಕಾಗ್ರತೆಯನು

ಕೀರ್ತನೆಗಳು 86:11

ರಿಂಗುನೊಳಗೆ

ನೀವು ಕ್ರೈಸ್ತರೆಂದು ಮತ್ತು ಯೇಸು ಕ್ರಿಸ್ತನನ್ನು ನಂಬುತ್ತಿದ್ದೀರೆಂದು ನಿಮ್ಮ ಸಮುದಾಯದಲ್ಲಿ ಅಥವಾ ನಿಮ್ಮ ಶಾಲೆಯಲ್ಲಿ ಬಹಿರಂಗವಾಗಿ ಹೇಳುವುದಕ್ಕೆ ಈ ವಾರದಲ್ಲಿ ಸಮಯವನ್ನು ತೆಗೆದುಕೊಳ್ಳಿರಿ. ಆದನಂತರ, ನೀವು ಎದುರ್ಗೊಳ್ಳುವ ಎಂಥಹ ಒತ್ತಡಕ್ಕೆ ಭಯಪಡದೇ, ಚಿಕ್ಕ ಪಾರ್ಟಿಯಲ್ಲಿ ನೀವು ನಂಬಿಗಸ್ತರಾಗಿರುವದರಿಂದ ಆನಂದಿಸಿರಿ.

3. ನಂಬಿಕೆ VS ಅನುಮಾನ



ಬೈಬಲ್ ಕಥೆ: ಕರ್ತನು ಸಮೂವೇಲನನ್ನು ಕರೆಯುವಿಕೆ
1 ಸಮೂ.3:1–21.

ಕಂಠಾಪಾಠ ವಚನ

"ವಿಶ್ವಾಸವೆಂಬುದು ನಾವು ನಿರೀಕ್ಷಿಸುವಂಥವುಗಳು ನಮಗೆ ದೊರಕುತ್ತವೆ ಎಂಬ ದೃಢ ನಂಬಿಕೆ ಹಾಗು ಕಣ್ಣಿಗೆ ಕಾಣದಂಥವುಗಳು ನಿಶ್ಚಯವಾದವು ಎಂಬ ನಿಲುವು ಆಗಿದೆ." ಹಿಬ್ರಿಯರಿಗೆ 11:1

ರಿಂಗುನೊಳಗೆ

ಈ ವಾರದಲ್ಲಿ ದೇವರು ನಿಮ್ಮೊಂದಿಗೆ ಮಾತನಾಡಲು ಮತ್ತು ನೀವು ಏನಾದರೊಂದನ್ನು ಮಾಡುವುದಕ್ಕೆ ಪ್ರಾರ್ಥನೆ ಮಾಡಿಕೊಳ್ಳಿರಿ. ಹಿಂಜರಿಯದೆ ಬೇಗನೆ ವಿಧೇಯತೆ ತೋರಿಸುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ನೀವು ಮರೆತು ಹೋದರೆ ಮತ್ತು ನಿರೀಕ್ಷಿಸುವುದಾದರೆ, ಮತ್ತೊಂದು ಕೆಲಸಕ್ಕಾಗಿ ದೇವರನ್ನು ಬೇಡಿಕೊಳ್ಳಿರಿ.

4. ನಂಬಿಕೆ VS ಅವಿಧೇಯತೆ

ಬೈಬಲ್ ಕಥೆ: ಕನಾನ್‌ನಲ್ಲಿ ಗೂಢಚಾರರು
ಅರಣ್ಯ.13:1–3, 17–33, 14:1–11



ಕಂಠಾಪಾಠ ವಚನ

"ಆದರೆ ಮೋಶೆ ಅವರಿಗೆ, "ಸರ್ವೇಶ್ವರನ ಆಜ್ಞೆಯನ್ನು ಏಕೆ ಮೀರುತ್ತೀರಿ? ಇದು ಕೈಗೂಡುವುದಿಲ್ಲ." ಸಂಖ್ಯಾಕಾಂಡ 14:41

ರಿಂಗುನೊಳಗೆ

ಈ ವಾರದಲ್ಲಿ ಮಾಡುವುದಕ್ಕೆ ದೇವರಿಂದ 2 ಮನೆಗೆಲಸಗಳನ್ನು ಆಯ್ಕೆ ಮಾಡಿಕೊಳ್ಳಿರಿ. ನೀವು ಮಾಡಬಾರದೆಂದು ದೇವರು ಕೇಳುವ ವಿಷಯಗಳನ್ನು ಮೊದಲನೇಯದಾಗಿ ಆರಿಸಿಕೊಳ್ಳಿರಿ ಮತ್ತು ನೀವು ಮಾಡಬೇಕೆಂದು ಹೇಳಿದ ದೇವರ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಿರಿ. ಅವಿಧೇಯತೆಯನ್ನು ಜಯಿಸಲು ಆ ಎರಡು ವಿಷಯಗಳಲ್ಲಿ ದೇವರಿಗೆ ವಿಧೇಯರಾಗಿರ್ರಿ.

5. ನಂಬಿಕೆ VS ತಡೆಹಿಡಿಯುವಿಕೆ

ಬೈಬಲ್ ಕಥೆ: ಅಬ್ರಹಾಮ ಮತ್ತು ಇಸಾಕ
ಆದಿ.22:1–18



ಕಂಠಾಪಾಠ ವಚನ

"ವಿಶ್ವಾಸವಿಲ್ಲದೆ ದೇವರ ಮೆಚ್ಚುಗೆಗೆ ಪಾತ್ರರಾಗಲು ಯಾರಿಂದಲೂ ಸಾಧ್ಯವಿಲ್ಲ. ದೇವರ ಬಳಿಗೆ ಸಾಗುವವರು, ಅವರ ಅಸ್ತಿತ್ವವನ್ನು ವಿಶ್ವಾಸಿಸಬೇಕು; ಅವರನ್ನು ಅರಸುವವರಿಗೆ ತಕ್ಕ ಪ್ರತಿಫಲ ಸಿಗುವದೆಂದು ನಂಬಬೇಕು." ಹಿಬ್ರಿಯರಿಗೆ 11:6



ರಿಂಗುನೊಳಗೆ

ಈ ವಾರದಲ್ಲಿ ದೇವರು ನಿಮ್ಮನ್ನು ಬಿಟ್ಟುಕೊಳ್ಳಬೇಕೆಂದು ಕೇಳುವದೇನಾದರೂ ಇದೆಯೋ? ಅದು ಏನೆಂಬುವುದರ ಕುರಿತಾಗಿ ಆಲೋಚಿಸುವುದಕ್ಕೆ ಒಂದು ನಿಮಿಷವನ್ನು ತೆಗೆದು ಆಲೋಚಿಸಿರಿ. ಆದನಂತರ ಅದನ್ನು ಬಿಟ್ಟುಕೊಳ್ಳುವುದಕ್ಕೆ ದೇವರು ನಿಮಗೆ ಶಕ್ತಿ ಕೊಡಬೇಕೆಂದು ಪ್ರಾರ್ಥಿಸಿರಿ. ಅದು ಟಿ, ಫೇಸ್‌ಬುಕ್ ಅಥವಾ ಇಷ್ಟವುಳ್ಳ ಆಹಾರವಾಗಿರಬಹುದು. ಈ ಹೋರಾಟದಲ್ಲಿ ನೀವು ಗೆಲ್ಲಬೇಕೆಂದಿದ್ದರೆ, ಅದನ್ನು ವಾರವೆಲ್ಲ ಬಿಟ್ಟುಕೊಳ್ಳುವುದಕ್ಕೆ ಇಷ್ಟಪಡಿರಿ.

6. ನಂಬಿಕೆ VS ನಂಬದಿರುವಿಕೆ

ಬೈಬಲ್ ಕಥೆ: ನೊವ ಮತ್ತು ಹಡಗು
ಆದಿ.5:32; 6:1–22; 7:1–12

ಕಂಠಾಪಾಠ ವಚನ

" ಒಬ್ಬನು, "ನಿನ್ನಲ್ಲಿ ವಿಶ್ವಾಸವಿದೆ, ನನ್ನಲ್ಲಿ ಸತ್ಕ್ರಿಯೆಗಳಿವೆ," ಎನ್ನಬಹುದು. ಅಂಥವನಿಗೆ, "ಸತ್ಕ್ರಿಯೆಗಳಿಲ್ಲದ ನಿನ್ನ ವಿಶ್ವಾಸವನ್ನು ನನಗೆ ತೋರಿಸು; ನನ್ನ ಸತ್ಕಾರ್ಯಗಳ ಮೂಲಕ ನನ್ನ ವಿಶ್ವಾಸವನ್ನು ನಿನಗೆ ವ್ಯಕ್ತಪಡಿಸುತ್ತೇನೆ," ಎಂದು ಉತ್ತರಿಸಬಹುದು."

ಯಾಕೋಬನು 2:18



ರಿಂಗುನೊಳಗೆ

ದೇವರಿಗೆ ನಂಬಿಗಸ್ತನಾಗಿರಲು ನಿಮ್ಮ ಜೀವನದಲ್ಲಿ ಯಾವುದಾದರೊಂದು ವಿಷಯವನ್ನು ಆಯ್ಕೆ ಮಾಡಿಕೊಳ್ಳಿರಿ. ಈ ವಾರದಲ್ಲಿನ ಒಂದು ದಿನದಂದು ದೇವರಿಗಾಗಿ ಕೆಲಸವನ್ನು ಮಾಡುವುದಕ್ಕೆ ಏನಾದರೊಂದನ್ನು ಆಯ್ಕೆ ಮಾಡಿಕೊಳ್ಳಿರಿ. ಇದನ್ನು ನೀವು ಸಂಪೂರ್ಣಗೊಳಿಸಿದಾಗ, ಇನ್ನೊಂದು ದಿನದಂದು ದೇವರಿಗಾಗಿ ಕೆಲಸ ಮಾಡುವುದಕ್ಕೆ ಇನ್ನೊಂದು ವಾಗ್ದಾನವನ್ನು ಆಯ್ಕೆ ಮಾಡಿಕೊಳ್ಳಿರಿ ಮತ್ತು ಅದು ಯಾವ ದಿನದಂದು ಮಾಡಬೇಕೆಂದು ಪ್ರಣಾಳಿಕೆ ಮಾಡಿಕೊಳ್ಳಿರಿ. ನಿಮ್ಮ ವಾಗ್ದಾನವನ್ನು ಸಂಪೂರ್ಣಗೊಳಿಸಲು ನಿಶ್ಚಯಪಡಿಸಿಕೊಳ್ಳಿರಿ.

7. ನಂಬಿಕೆ VS ಸಂಶಯ



ಬೈಬಲ್ ಕಥೆ: ಯೇಸು ತೋಮಾನಿಗೆ ಕಾಣಿಸಿಕೊಂಡಿದ್ದು

ಯೋಹಾನ.20:24–31

ಕಂಠಾಪಾಠ ವಚನ

"ಯೇಸು ಅವನಿಗೆ, "ನನ್ನನ್ನು ಕಂಡುದರಿಂದ ತಾನೆ ನಿನಗೆ ವಿಶ್ವಾಸ ಹುಟ್ಟಿತು? ಕಾಣದೆ ವಿಶ್ವಾಸಿಸುವವರು ಧನ್ಯರು," ಎಂದು ಹೇಳಿದರು." ಯೊವಾನ್ನ 20:29

ರಿಂಗುನೊಳಗೆ

ಅಸಾಧ್ಯವಾದ ಕಾರ್ಯವೆಂದು ಕಾಣಿಸಿಕೊಳ್ಳುವ ವಿಷಯಗಳಲ್ಲಿ ದೇವರು ನಿಮಗೆ ವಾಗ್ದಾನ ಮಾಡಿದ್ದಾರೆಂದು ತಿಳಿದು, ಈ ವಾರದಲ್ಲಿ ಯಾವುದಾದರೊಂದರ ವಿಷಯದ ಮೇಲೆ ದೇವರನ್ನು ನಂಬುವುದಕ್ಕೆ ಆಯ್ಕೆ ಮಾಡಿಕೊಳ್ಳಿರಿ. ದೇವರು ಆತನ ವಾಗ್ದಾನವನ್ನು ಸಂಪೂರ್ಣಗೊಳಿಸುವವರೆಗೂ ಕಾದಿರುವುದಕ್ಕೆ ಇಷ್ಟಪಡುತ್ತೇನೆಂದು ದೇವರಿಗೆ ತಿಳಿಸಿರಿ. ನೀವು ಕಾದಿರಲು ಇಷ್ಟಪಟ್ಟಿದ್ದೀರೆಂದು ತೋರಿಸಿಕೊಳ್ಳುವುದಕ್ಕೆ, ನೀವು ನಿಲ್ಲಬೇಕಾದಂಥ ಅವಶ್ಯಕತೆಯಿಲ್ಲದಿರುವ ಸ್ಥಳಕ್ಕೆ ಹೋಗಿ, ಅಲ್ಲಿರುವ ಸಾಲಿನಲ್ಲಿ ನಿಂತುಕೊಳ್ಳಿರಿ! ಆ ಸಾಲಿನಲ್ಲಿ ನೀವು ಎಷ್ಟು ನಿಮಿಷಗಳ ಕಾಲ ಕಾದಿದ್ದೀರೆಂದು ಬರೆದುಕೊಳ್ಳಿರಿ, ಅದರಿಂದ ನೀವು ನಿಮ್ಮ ಕೋಚ್‌ಗೆ ಆ ರಿಪೋರ್ಟನ್ನು ತೋರಿಸಬಹುದು.

8. ಸಾಧುತ್ವ VS ಅಂತಃಕಲಹ

ಬೈಬಲ್ ಕಥೆ: ಅಬ್ರಹಾಮ ಮತ್ತು ಲೋಟರ ಬೇರ್ಪಾಟು
ಆದಿ.13:1–18

ಕಂಠಾಪಾಠ ವಚನ

"ಯಾವಾಗಲೂ ದೀನದಯಾಳತೆ, ವಿನಯಶೀಲತೆ ಹಾಗೂ ಶಾಂತಿಸಮಾಧಾನವುಳ್ಳವರಾಗಿರಿ. ಪರಸ್ಪರ ಪ್ರೀತಿಯಿಂದಲೂ ಸಹನೆಯಿಂದಲೂ ವರ್ತಿಸಿರಿ."

ಎಫೆಸಿಯರಿಗೆ 4:2



ರಿಂಗುನೊಳಗೆ

ನೀವು ಯಾವ ವಿಷಯದಲ್ಲಾದರೂ ಒಪ್ಪದಿರುವಾಗ, ಇನ್ನೊಬ್ಬರು ಆ ವಿಷಯದಲ್ಲಿ ಗೆಲ್ಲುವುದಕ್ಕೆ ಅನುಮತಿಸಿರಿ. ನೀವು ಒಪ್ಪದಿರುವಿಕೆಯನ್ನು ಆಯ್ಕೆ ಮಾಡಿಕೊಳ್ಳಬಹುದು, ಆದರೆ ಅವರೊಂದಿಗೆ ಜಗಳವಾಡುವುದ್ನು ನಿಮ್ಮಷ್ಟಕ್ಕೆ ನೀವೆ ನಿಲ್ಲಿಸಬೇಕು. ಅವರ ಸ್ವಂತ ಅಭಿಪ್ರಾಯವನ್ನು ಹೊಂದಿಕೊಂಡಿರುವುದಕ್ಕೆ ಅವರಿಗೆ ಅನುಮತಿ ಕೊಡಿರಿ.

9., ಸಾಧುತ್ವ VS ಸಂಪ್ರದಾಯಗಳು



ಬೈಬಲ್ ಕಥೆ: ಶುಚಿ ಮತ್ತು ಅಶುಚಿ
ಮತ್ತಾಯ.15:1–20

ಕಂಠಾಪಾಠ ವಚನ

"ಯೆಹೂದ್ಯರಿಗಾಗಲಿ, ಗ್ರೀಕರಿಗಾಗಲಿ, ದೇವರ ಧರ್ಮಸಭೆಗಾಗಲಿ ಬಾಧಕರಾಗಿರಬೇಡಿ. ನಾನಂತೂ ನನ್ನ ಸ್ವಂತ ಹಿತವನ್ನು ಲೆಕ್ಕಿಸದೆ ಸರ್ವರ ಉದ್ಧಾರಕ್ಕಾಗಿ ಅವರ ಹಿತವನ್ನು ಅಪೇಕ್ಷಿಸಿ, ಎಲ್ಲರನ್ನೂ ಎಲ್ಲದರಲ್ಲೂ ಮೆಚ್ಚಿಸಲು ಪ್ರಯತ್ನಿಸುತ್ತೇನೆ." ೧ ಕೊರಿಂಥಿಯರಿಗೆ 10:32,33

ರಿಂಗುನೊಳಗೆ

ನಿಮ್ಮ ಸಂಪ್ರದಾಯಗಳಿಗಿಂತ ಒಬ್ಬರ ಮೇಲೆ ದಯೆಯನ್ನು ತೋರಿಸುವುದನ್ನು ಆಯ್ಕೆ ಮಾಡಿಕೊಳ್ಳಿರಿ. ಇದರ ಅರ್ಥವೇನಂದರೆ, ನಿಮ್ಮ ಸಂಪ್ರದಾಯಗಳನ್ನು ಅನುಸರಿಸದೇ ಇರುವಾಗ, ಅದರ ಕುರಿತಾಗಿ ಯಾವ ಮಾತನ್ನು ಮಾತನಾಡಬೇಡಿರಿ. ಯಾರನ್ನು ನೋಯಿಸಬೇಡಿರಿ ಅಥವಾ ಈ ಮನೆಗೆಲಸದೊಂದಿಗೆ ನಿಮ್ಮಷ್ಟಕ್ಕೆ ನೀವೆ ಶ್ರದ್ಧೆಯನ್ನು ವಹಿಸಿಕೊಳ್ಳಿರಿ.

10., ಸಾಧುತ್ವ VS ಕಹಿತನ



ಬೈಬಲ್ ಕಥೆ: ಕಾಯಿನ ಮತ್ತು ಹೇಬೆಲ
ಆದಿ.4:1–16

ಕಂಠಾಪಾಠ ವಚನ

"ಎಲ್ಲ ವಿಧವಾದ ದ್ವೇಷ-ದೂಷಣೆ, ಕೋಪ-ಕ್ರೋಧ ಮತ್ತು ಕೆಡುಕುತನವನ್ನು ನಿಮ್ಮಿಂದ ದೂರಮಾಡಿರಿ." **ಎಫೆಸಿಯರಿಗೆ** 4:31



ರಿಂಗುನೊಳಗೆ

ನೀವು ಕೋಪಪಡುವ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿಕೊಂಡು, ಅವರನ್ನು ಕ್ಷಮಿಸಿರಿ. ಪ್ರಾರ್ಥನೆಯಲ್ಲಿ ಒಂದು ಕ್ಷಣವನ್ನು ತೆಗೆದುಕೊಂಡು, "ನಾನು ನಿನ್ನನ್ನು ಕ್ಷಮಿಸುತ್ತಿದ್ದೇನೆ" ಎಂದು ಗಟ್ಟಿಯಾಗಿ ಕೂಗಿರಿ.

11., ಶಮೆದಮೆ VS ಕಹಿತನ



ಬೈಬಲ್ ಕಥೆ: ಯೇಸು ಶೋಧಿಸಲ್ಪಟ್ಟಿದ್ದನು
ಮತ್ತಾಯ.4:1–11

ಕಂಠಾಪಾಠ ವಚನ

"ಮಾನವರಿಂದ ಜಯಿಸಲಾಗದ ಶೋಧನೆಗಳೇನೂ ನಿಮಗೆ ಬಂದಿಲ್ಲ. ದೇವರು ಕೊಟ್ಟಮಾತಿಗೆ ತಪ್ಪಲಾರರು. ಗೆಲ್ಲಲಾಗದ ಶೋಧನೆಗಳಿಗೆ ನಿಮ್ಮನ್ನೆಂದೂ ಗುರಿಪಡಿಸಲಾರರು. ಶೋಧನೆಗಳು ಬಂದಾಗ ಅವುಗಳನ್ನು ಸಹಿಸಿಕೊಳ್ಳುವ ಶಕ್ತಿಯನ್ನೂ ತಪ್ಪಿಸಿಕೊಳ್ಳುವ ಮಾರ್ಗವನ್ನೂ ಅವರೇ ಒದಗಿಸುತ್ತಾರೆ." ೧ ಕೊರಿಂಥಿಯರಿಗೆ 10:13



ರಿಂಗುನೊಳಗೆ

ಒಂದು ಶೋಧನೆಯನ್ನು ತಡೆಯಿರಿ ಮತ್ತು ಯೇಸು ಕ್ರಿಸ್ತನು ಮಾಡಿದಂಥೆ, ನಿಮಗೆ ಸಾಧ್ಯವಾದರೆ ವಾಕ್ಯಗಳನ್ನು ಉಪಯೋಗಿಸಿರಿ. ನಿಮ್ಮ ಆಸೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದನ್ನು ಕಾಪಾಡಿಕೊಳ್ಳಿರಿ ಮತ್ತು ಶೋಧನೆಯಲ್ಲಿ ಸೋತು ಹೋಗುವಂಥೆ ನಿಮ್ಮನ್ನು ನೀವು ಬಿಟ್ಟುಕೊಳ್ಳಬೇಡಿರಿ.

12., ಶಮೆದಮೆ VS ಸುಳ್ಳಾಡುವಿಕೆ

ಬೈಬಲ್ ಕಥೆ: ಯಾಕೋಬನು ಏಸಾವನ ಆಶೀರ್ವಾದವನ್ನು ಕದ್ದುಕೊಂಡಿದ್ದು
ಆದಿ.27:1–36

ಕಂಠಾಪಾಠ ವಚನ

"ಸುಳ್ಳುನಾಲಿಗೆ ಹಗೆಮಾಡುತ್ತದೆ ಸತ್ಯವನ್ನು; ಹೊಗಳುಭಟ್ಟನ ಬಾಯಿ ತರುತ್ತದೆ ನಷ್ಟವನ್ನು." ಜ್ಞಾನೋಕ್ತಿಗಳು 26:28

ರಿಂಗುನೊಳಗೆ

ಚಿಕ್ಕವರಾಗಿರಲಿ ದೊಡ್ಡವರಾಗಿರಲಿ ಪ್ರತಿಯೊಬ್ಬರು ಸುಳ್ಳು ಹೇಳುತ್ತಾರೆ. ಈ ವರ್ಷದಲ್ಲಿ ನೀವು ಹೇಳಿರುವ ಸುಳ್ಳನ್ನು ಒಂದುಸಲ ನೆನಪಿಸಿಕೊಳ್ಳಿರಿ. ಆ ವ್ಯಕ್ತಿಯ ಬಳಿಗೆ ಹೋಗಿ, ಸತ್ಯವನ್ನು ಹೇಳಿರಿ ಮತ್ತು ಅವರಿಗೆ ಸುಳ್ಳು ಹೇಳಿದ್ದಕ್ಕಾಗಿ ಕ್ಷಮೆಗಾಗಿ ಬೇಡಿಕೊಳ್ಳಿರಿ.



13. ಶಮೆದಮೆ VS ಸೋಮಾರಿತನ



ಬೈಬಲ್ ಕಥೆ: ಬುದ್ಧಿಯುಳ್ಳ ಮತ್ತು ಬುದ್ಧಿಯಿಲ್ಲದ ಮನುಷ್ಯರು
ಮತ್ತಾಯ.7:24–27

ಕಂಠಾಪಾಠ ವಚನ

"ಒಬ್ಬನು ಒಳ್ಳೆಯದನ್ನು ಮಾಡಬೇಕೆಂದು ತಿಳಿದಿದ್ದೂ ಅದನ್ನು ಮಾಡದಿದ್ದರೆ ಅದು ಅವನಿಗೆ ಪಾಪವಾಗಿರುತ್ತದೆ." ಯಾಕೋಬನು 4:17

ರಿಂಗುನೊಳಗೆ

ನೀವು ಮಾಡುವುದಕ್ಕೆ ಇಷ್ಟವಾಗದಿರುವ ಕೆಲಸವನ್ನು ಆಯ್ಕೆಮಾಡಿಕೊಂಡು, ಅದನ್ನು ಮಾಡುವುದರ ಮೂಲಕ ಈ ವಾರದಲ್ಲಿ ನಿಮ್ಮ ಸೋಮಾರಿತನಕ್ಕೆ ವಿರುದ್ಧವಾಗಿ ಹೋರಾಟ ಮಾಡಿರಿ. ಅದನ್ನು ಪೂರ್ತಿಯಾಗಿ ಮಾಡಿರಿ ಮತ್ತು ಆ ಸಾಕ್ಷಿಯನ್ನು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿರಿ.

ನಿಮ್ಮ ಬೆಡ್‌ರೂಮ್ ಅಥವ ನಿಮ್ಮ ಮನೆಯನ್ನು ಶುಚಿ ಮಾಡಲು ಪ್ರಾರ್ಥಿಸಬೇಡಿರಿ. ಅದನ್ನು ನೀವೇ ಮಾಡಿರಿ.



"ದೇವರ ವಾಕ್ಯವನ್ನು ಕಿವಿಯಿಂದ ಕೇಳಿದರೆ ಸಾಕೆಂದು ತಿಳಿದು ಮರುಳಾಗದಿರಿ. ಆ ವಾಕ್ಯವನ್ನು ಅನುಸರಿಸಿ ನಡೆಯುವವರಾಗಿರಿ." ಯಾಕೋಬನು.1:22

Champions 3
Medium Kannada
20221

www.ChildrenAreImportant.com
info@children5areimportant.com
We are located in Mexico.

ಮಕ್ಕಳೇ ಪ್ರಮುಖರು